- -                    ಅಸಲು ದಾವೆ ಸಂ: **79/2022**   ಪಿ.ಡಬ್ಲು-**2**

**ದಿ: 24-07-2026   ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: 2 ರಿಂದ 4ನೇ ಪ್ರತಿವಾದಿಯರ ಪರವಾಗಿ ಶ್ರೀ  ಬಿ.ಎಸ್.  ವಕೀಲರಿಂದ:**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯಗಳನ್ನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ರಾಮಲಿಂಗಪ್ಪನ ಮೊಮ್ಮಗ ನಿಂಗಪ್ಪ ಇವರು ದಂಡಪ್ಪ, ಮಲ್ಲಪ್ಪ ಮತ್ತು ಮರಿಯಪ್ಪ ಇವರ ಮೇಲೆ ಸಲ್ಲಿಸಿರುತ್ತಾರೆ. ಪ್ರತಿವಾದಿ ನಂಬರ್ 1 ಮತ್ತು 3 ರವರು ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯಕ್ಕೆ

ಕರೆದಿರುತ್ತಾರೆ. ನಾನು ದೇವದುರ್ಗದಲ್ಲಿ 4 ವರ್ಷದಿಂದ ವಾಸ ಮಾಡುತ್ತಿದ್ದೇನೆ. ಖರೀದಿ ಕರಾರು ಪತ್ರದ ಮಾತುಕತೆಯು 1987 ರಲ್ಲಿ ನಮ್ಮ ಮನೆಯಲ್ಲಿ ಮಾತುಕತೆ ಆಗಿರುತ್ತದೆ. ಆವತ್ತು ಯಾವ ತಾರೀಖು ಮತ್ತು ಯಾವ ವಾರ ಇತ್ತು ಎಂದು ನನಗೆ ಗೊತ್ತಿಲ್ಲ. ಮಾತುಕತೆಯಾಗುವ ಸಮಯದಲ್ಲಿ ಮಾರಾಟಗಾರರಾದ ಸಾಬಣ್ಣ, ಖರೀದಿದಾರರಾದ ರಾಮಲಿಂಗಪ್ಪ, ಸಾಕ್ಷಿದಾರರಾಗಿ ಗಿಡ್ಡಮನಿ ಬಸ್ಸಣ್ಣ, ಹರಿಜನ ಹನುಮಪ್ಪ, ಮೈಲಾರಪ್ಪ, ಪಿಡ್ಡೆಯ್ಯ, ಚನ್ನಪ್ಪ , ಮಾತ್ಪಳ್ಳಿ ಚಂದ್ರಪ್ಪ ಮತ್ತು ನಾನು ಇದ್ದೇವು. ಖರೀದಿ ಮಾತುಕತೆಯು 04 ಎಕರೆ 29 ಗುಂಟೆ ಜಮೀನಿಗೆ ರೂ 5,000/- ಗಳಂತೆ ಆಗಿರುತ್ತದೆ. ಮೊದಲು ರೂ 4500/- ಕೊಟ್ಟಿರುತ್ತಾರೆ. ನಂತರ ರೂ 500/- ಕೊಟ್ಟಿರುತ್ತಾರೆ. ಖರೀದಿ ಮಾತುಕತೆಯ ದಿನಾಂಕದಂದು ರೂ 4500/- ಗಳನ್ನು ಪಾವತಿ ಮಾಡಿರುತ್ತಾರೆ. ಮತ್ತು ಉಳಿಕೆ ರೂ 500/- ಗಳನ್ನು ಖರೀದಿ ನೋಂದಣಿ ಮಾಡುವ ಸಮಯದಲ್ಲಿ ಪಾವತಿ ಮಾಡಬೇಕೆಂದು ಆಗಿದ್ದು ನನಗೆ ಅರಾಮ ಇಲ್ಲ ಎಂದು ಅವರು ರೂ 500/- ಉಳಿಕೆ ಹಣ ಪಡೆದುಕೊಂಡಿರುತ್ತಾರೆ. ರೂ 500/- ಉಳಿಕೆ ಹಣವನ್ನು ಯಾವಗ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಏಕೆಂದರೆ ನನ್ನ ಸಮಕ್ಷಮ ರೂ 500/- ಹಣವನ್ನು ಕೊಟ್ಟಿರುವುದಿಲ್ಲ ರಾಮಲಿಂಗಪ್ಪನವರೆ ನನಗೆ ರೂ 500/- ಕೊಟ್ಟಿರುವ ವಿಷಯ ತಿಳಿಸಿರುತ್ತಾರೆದ.

2. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಖರೀದಿ ಕರಾರು ಪತ್ರದ ಮಾತುಕತೆಯ ಸಮಯಕ್ಕೆ ರೂ 5000/- ಗಳಿಗೆ ಮಾತುಕತೆಯಾಗಿದ್ದು, ಆ ಪೈಕಿ ರೂ 4500/- ಗಳನ್ನು ಪಾವತಿಸಿದ್ದು ಉಳಿಕೆ ಹಣವನ್ನು ರೂ 500/- ನಂತರದಲ್ಲಿ ಪಾವತಿಸಬೇಕೆಂದು ಬರೆದಿದೆ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಫ್ಲಾರಾ

ನಂಬರ್ 3 ರ 4 ನೇ ಸಾಲಿನಲ್ಲಿ ರೂ 4500/- ಗಳಿಗೆ ಮಾತುಕತೆಯಾಗಿದ್ದು ಆ ಪೈಕಿ ರಾಮಲಿಂಗಪ್ಪ ರೂ 4000/- ಗಳನ್ನು ಪಾವತಿಸಿದ್ದು ಉಳಿಕೆ ಹಣವನ್ನು ರೂ 500/- ನೊಂದಣಿ ಸಮಯದಲ್ಲಿ ಪಾವತಿಸಬೇಕೆಂದು ನಮೂದಿಸಿದೆ ಎಂದರೆ ಹೌದು ಆದರೆ ಖರೀದಿ ಮಾತುಕತೆ ರೂ 5000/- ಗಳಿಗೆ ಆಗಿರುತ್ತದೆ. ಹಾಗಿದ್ದರೆ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನಿ ಪಿ 1 ದಾಖಲೆಯ ಪ್ರಕಾರ ಬರೆದಿಲ್ಲ ಎಂದರೆ ಸಾಕ್ಷಿಯು ನನಗೆ ಸ್ಟಾಂಪ್ ಪೇಪರ್ ನಲ್ಲಿ ಬರೆದ ವಿಷಯಗಳ ಬಗ್ಗೆ ಗೊತ್ತಿದೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

3. ಖರೀದಿ ಕರಾರು ಪತ್ರದ ಮಾತುಕತೆಯು ಬೆಳಿಗ್ಗೆ 10-00 ರಿಂದ 11-00 ಗಂಟೆಗೆ ಆಗಿರುತ್ತದೆ. ಆವತ್ತೆ ಸಾಬಣ್ಣ ಸ್ಟಾಂಪ್ ತಂದು ಕೊಟ್ಟು ಬರೆದುಕೊಟ್ಟಿರುತ್ತಾನೆ. ಸ್ಟಾಂಪ್ ಪೇಪರ್ ನ್ನು ಯಾರು ಬರೆದಿದ್ದಾರೆ ಎಂದು ನನಗೆ ನೆನಪಿಲ್ಲ. ಸ್ಟಾಂಪ್ ಪೇಪರ್ ಫಾಳೆಪ್ಪನವರಿಂದ ಖರೀದಿ ಮಾಡಿರುತ್ತಾರೆ ಸ್ಟಾಂಪ್ ಪೇಪರ್ ಖರೀದಿ ಮಾಡಿದ ತಾರೀಖು ನನಗೆ ನೆನಪಿಲ್ಲ. ಸ್ಟಾಂಪ್ ಪೇಪರ್ ನ ಹಿಂದೆ ಫಾಳೆಪ್ಪನ ಹೆಸರು ಬರೆದಿರುವುದು ನಾನು ಅಷ್ಟು ನೋಡಿರುವುದಿಲ್ಲ. ಮರಿಯಪ್ಪನ ಪರವಾಗಿ ಅಸಲು ದಾವಾ ಸಂಖ್ಯೆ 19/2018 ರಲ್ಲಿ ನೀವು ಪಿ ಡಬ್ಲು -3 ಎಂದು ನೀವು ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿ. ಇದೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸದರಿ ದಾವೆಯಲ್ಲಿ ನೀವು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಹಿಂದಿನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಜಮೀನು ಖರೀದಿ ಆಗಿದೆ ಎಂದು ನೀವು ಎಲ್ಲಿಯೂ ಹೇಳಿಲ್ಲ

ಎಂದರೆ ಸಾಕ್ಷಿಯು ಆವತ್ತು ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನೂ ಬರೆದಿದೆ ಎಂದು ಗೊತ್ತಿಲ್ಲ. ಮರಿಯಪ್ಪನ ಪರವಾಗಿ ಅಸಲು ದಾವಾ ಸಂಖ್ಯೆ 19/2018 ರಲ್ಲಿ ನೀವು ಪಿ ಡಬ್ಲು -3 ಎಂದು ನೀವು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ನೀವು ಸಹಿ ಮಾಡಿದ್ದೀರಿ ಎಂದರೆ ಸರಿ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಡಿ -1 ಎಂದು ಸಾಕ್ಷಿದಾರರ ಸಹಿಯನ್ನು ನಿ ಡಿ 1(ಎ) ಎಂದು ಗುರುತಿಸಲಾಯಿತು. ಸದರಿ ನಿ ಡಿ 1 ದಾಖಲೆಗೆ ಮತ್ತು ಈ ದಾವೆಯ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ನೀವು ಕನ್ನಡದಲ್ಲಿ ಕೆ. ಚಿನ್ನಪ್ಪ ಎಂದು ಸಹಿ ಮಾಡಿದ್ದೀರಿ ಎಂದರೆ ಸರಿ. ದಿನಾಂಕ: 25-06-2007 ರ ಖರೀದಿ ಪತ್ರದಲ್ಲಿ ಖರೀದಾರ ಶ್ರೀ ಶರಣಪ್ಪ ತಂದೆ ಬೂದೆಪ್ಪ ಸಾ: ಹೊನ್ನಟಗಿ ಮತ್ತು ಮಾರಾಟಗಾರರಾದ ದಂಡಪ್ಪ ತಂದೆ ದಿವಂಗತ ಸಾಬಣ್ಣ ಸಾ: ಮಸಿಹಾಳ ಇವರ ಖರೀದಿ ಪತ್ರಕ್ಕೆ ನೀವು 5 ನೇ ಪುಟದಲ್ಲಿ 3ನೇ ಸಾಕ್ಷಿದಾರರಾಗಿ ಕೆ.ಚಿನ್ನಪ್ಪ ಎಂದು ನಿಮ್ಮ ಸಹಿಯನ್ನು ಕನ್ನಡದಲ್ಲಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಹೌದು ಅದೇ ರೀತಿ ಮಾಡುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ಖರೀದಿ ಪತ್ರದ ದೃಢೀಕೃತ ಆನ್ ಲೈನ್ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ ಡಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಡಿ 2(ಎ) ಎಂದು ಗುರುತಿಸಲಾಯಿತು. ನಾನು ಕನ್ನಡದಲ್ಲಿ ನನ್ನ ಸಹಿಯನ್ನು ಕೆ ಚಿನ್ನಪ್ಪ ಮಾತ್ರ ಎಂದು ಮಾಡುತ್ತೇನೆ ಅದನ್ನು ಬಿಟ್ಟು ಬೇರೆ ರೀತಿ ಮಾಡುವುದಿಲ್ಲ. ಸಾಕ್ಷಿಗೆ ನಿ ಪಿ 1 ರ ದಾಖಲೆಯಲ್ಲಿ ನಿಮ್ಮ ಸಹಿ ಬೇರೆ ರೀತಿಯಲ್ಲಿ ಇದ್ದು ಅದು ನಿಮ್ಮ ಸಹಿ ಆಗಿರುವುದಿಲ್ಲ ಎಂದು ಸೂಚಿಸಿದ್ದು ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಿ ಪಿ 1 ದಾಖಲೆಯಲ್ಲಿ

ನಿಮ್ಮ ಸಹಿಯನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿ ಪಿ 1 ದಾಖಲೆಯಲ್ಲಿ ಸಾಬಣ್ಣ ಮತ್ತು ಸಾಕ್ಷಿದಾರರ ಸಹಿಗಳನ್ನು ಖೊಟ್ಟಿಯಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ದಿನಾಂಕ: 10-06-1987 ರಂದು ನಿಮ್ಮ ಸಮಕ್ಷಮದಲ್ಲಿ ಖರೀದಿ ಕರಾರು ಪತ್ರದ ಮಾತುಕತೆಯಾಗಿ ಮಾರಾಟಗಾರರು ರೂ 5000/- ವ್ಯವಹಾರಕ್ಕೆ ಒಪ್ಪಿ ಅದರ ಪೈಕಿ ಮುಂಗಡವಾಗಿ ರೂ 4500/- ಪಾವತಿಸಿ ಉಳಿಕೆ ಹಣ ರೂ 500/- ಖರೀದಿ ನೊಂದಣಿ ಸಮಯಕ್ಕೆ ಕೊಡುವುದಾಗಿ ಒಪ್ಪಿ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಬಣ್ಣ ರಾಮಲಿಂಗಪ್ಪ ರವರಿಗೆ ದಾವಾ ಜಮೀನನ್ನು ಮಾರಾಟ ಮಾಡಿಲ್ಲ ಮತ್ತು ಅವರಿಂದ ಯಾವುದೇ ಹಣವನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸಾಬಣ್ಣ ರವರು ರಾಮಲಿಂಗಪ್ಪರವರಿಗೆ ನಿ ಪಿ 1 ರಂತೆ ಸ್ಟಾಂಪ್ ಪೇಪರ್ ನ್ನು ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸ್ಟಾಂಪ್ ಪೇಪರ್ ಬರೆದುಕೊಟ್ಟ ದಿನಾಂಕದಂದೆ ದಾವ ಆ ಜಮೀನಿನ ಕಬ್ಜಾವನ್ನು ಸಾಬಣ್ಣ ರಾಮಲಿಂಗಪ್ಪನಿಗೆ ಕೊಟ್ಟಿದ್ದಾನೆಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಹೊಲವನ್ನು ಸಾಬಣ್ಣ ಖರೀದಿ ಮಾಡಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸಾಬಣ್ಣ ಜೀವಂತ ಇದ್ದ ಕಾಲಕ್ಕೆ ಆತನ ಜಮೀನಿನ ಮಾಲೀಕ ಮತ್ತು ಕಬ್ಜಾದಾರನಾಗಿದ್ದ ಎಂದರೆ ಸಾಕ್ಷಿಯು ಮಾರಾಟ ಮಾಡಿದ ಮೇಲೆ ಹೊಂದಿಲ್ಲ ಎನ್ನುತ್ತಾರೆ. ಸಾಬಣ್ಣನ ಮರಣದ ತರುವಾಯ ಪ್ರತಿವಾದಿ 2 ರಿಂದ 4 ರವರು ಅವರ ವಾರಸುದಾರರಾಗಿ ಮಾಲೀಕರು ಮತ್ತು ಕಬ್ಜಾದಾರರಾಗಿರುತ್ತಾರೆ

ಎಂದರೆ ಸರಿಯಲ್ಲ. ರಾಮಲಿಂಗಪ್ಪ ಮತ್ತು ವಾದಿಯರು ದಾವಾ ಜಮೀನಿನ ಕಬ್ಜಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನಿಮಗೆ ಏನೂ ಮಾಹಿತಿ ಇರದೇ ಇದ್ದರೂ ವಾದಿಯರ ಮಾತು ಕೇಳಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ